ಜಲವಿದ್ಯುತ್ ಕೇಂದ್ರ ಕುರಿತು

452 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಂಷಾ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು?

ಆ) ದಿನಂಪ್ರತಿ ಎಷ್ಟು ಮೆ.ವ್ಯಾಟ್ಸ್ ವಿದ್ಯುತ್ತು ಅಲ್ಲಿ ಉತ್ಪಾದಿಸಲಾಗುತ್ತಿದೆ?

ಇ) ಇತ್ತೀಚಿನ ದಿವಸಗಳಲ್ಲಿ ಅಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿದೆ ಎಂಬ ವಿಚಾರ ನಿಜವೇ?

ಈ) ನಿಜವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಉ) ಶರಾವತಿ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು ಮತ್ತು ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಎಷ್ಟು?

ಊ) ಈಗ ಅಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು?

ಋ) ಪ್ರತಿದಿನ ಉತ್ಪಾದಿಸಲಾಗುತ್ತಿದ್ದ ವಿದ್ಯುಚ್ಛಕ್ತಿಯ ಪ್ರಮಾಣವು ಕಡಿಮೆಯಾಗಿರುವುದು ನಿಜವೇ?

ೠ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) 1939ರಲ್ಲಿ ಪ್ರಾರಂಭವಾಯಿತು

ಆ) ಸರಾಸರಿ 16 ಮೆಗಾವ್ಯಾಟ್ಸ್ ವಿದ್ಯುತ್ತು ಉತ್ಪಾದಿಸಲಾಗುತ್ತಿದೆ.

ಇ) 19-1-1994ರಿಂದ 8-3-1994ರವರೆಗೆ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿತ್ತು.

ಈ) ವಿರಮನೇ ಜನರೇಟರ್ಗೆ ಜೋಡಿಸಲ್ಪಟ್ಟಿರುವ ಟರ್ಬೈನ್ ದುರಸ್ತಿಗೆ ಒಳಪಟ್ಟಿದ್ದುರಿಂದ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಗೊಂಡಿತ್ತು. ದುರಸ್ತಿ ಕಾರ್ಯವನ್ನು 8-3-94ರಂದು ಪೂರ್ಣಗೊಳಿಸಿ ಸದರೀ ಜನರೇಟರ್ ಟರ್ಬೈನನ್ನು ಸರಿಪಡಿಸಲಾಗಿದೆ.

ಉ) ಶರಾವತಿ ಜಲವಿದ್ಯುತ್ ಕೇಂದ್ರವು 1964ನೇ ವರ್ಷದಲ್ಲಿ ಪ್ರಾರಂಭವಾಯಿತು. ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ವರ್ಷಕ್ಕೆ 4300 ಮಿಲಿಯನ್ ಯೂನಿಟ್ಗಳು.

ಊ) 1993-94ನೇ ಇಸವಿಯ ಫೆಬ್ರವರಿ ತಿಂಗಳ ಅಂತ್ಯದವರೆಗೆ ಬಿಟ್ಟು 4338 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದ್ದು ಅದು ಈ ವರ್ಷದಲ್ಲಿ ಇಲ್ಲಿಯವರೆಗೆ ಹಾಕಿಕೊಂಡಿದ್ದ ನಿರ್ದಿಷ್ಟ ಗುರಿಯಾದ 4231 ಮಿಲಿಯನ್ ಯೂನಿಟ್ಗಿಂತ ಹೆಚ್ಚಾಗಿದ್ದು ಗುರಿಗಿಂತ ಹೆಚ್ಚು ಉತ್ಪಾದನೆಯನ್ನು ಮಾಡಲಾಗಿದೆ. ಅಂದರೆ 107 ಮಿಲಿಯನ್ ಯೂನಿಟ್ ಉತ್ಪಾದನೆ ಹೆಚ್ಚಿದೆ.

ಋ) ಮೇಲೆ ತಿಳಿಸಿರುವಂತೆ ಉತ್ಪಾದನೆಯ ಪ್ರಮಾಣ ಕಡಿಮೆಯಾಗಿಲ್ಲ.

ೠ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿರುವ ಮುಖ್ಯ ಅಭಿಯಂತರರುಗಳ ಹುದ್ದೆಗಳ ಕುರಿತು

451 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಒಟ್ಟು ಮುಖ್ಯ ಇಂಜಿನಿಯರ್ಗಳ ಹುದ್ದೆಗಳೆಷ್ಟು?